**AANDOLANA**

Date: Saturday, March 22, 2014 | Page:3

Edition: Mysore | Language: Kannada

# ಉತ್ತಮ ಸಂಸ್ಥೆಗಳಿಂದ ದೇಶದ ಪ್ರಗತಿ

## ಎಸ್‌ಡಿಎಂಐಎಂಡಿಯ ಪಿಜಿಡಿಎಂ ಘಟಿಕೋತ್ಸವದಲ್ಲಿ ಸುಬ್ರೊತೊ ಬಗ್ಚಿ

ಮೈಸೂರು,ಮಾ.೨೧-ಯಾವುದೇ ಒಂದು ದೇಶ ಅಭಿವೃದ್ಧಿ ಹೊಂದಬೇಕಾದರೆ ಉತ್ತಮ ಸಂಸ್ಥೆಗಳು ಅವಶ್ಯಕ ಎಂದು ಖ್ಯಾತ ವಾಣಿಜ್ಯೋದ್ಯಮಿ ಮತ್ತು ಮೈಂಡ್‌ಟ್ರೀ ಸಂಸ್ಥೆ ಅಧ್ಯಕ್ಷ ಸುಬ್ರೊತೊ ಬಗ್ಚಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಚಾಮುಂಡಿ ಬೆಟ್ಟದ ರಸ್ತೆಯಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣ ಅಭಿವೃದ್ಧಿ ಸಂಸ್ಥೆ(ಎಸ್‌ಡಿಎಂಐಎಂಡಿ)ಯ ಆವರಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ೨೦೧೩-೧೪ನೇ ಸಾಲಿನ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ (ಪಿಜಿಡಿಎಂ) ೧೯ನೇ ಘಟಿಕೋತ್ಸವ ಸಮಾರಂಭದಲ್ಲಿ ಘಟಿಕೋತ್ಸವ ಭಾಷಣ ಮಾಡಿದ ಅವರು, ವಿದ್ಯಾರ್ಥಿಗಳಿಗೆ ಜಪಾನ್‌ನಲ್ಲಿರುವ ಹೆಸರಾಂತ ಕಂಪನಿಗಳ ಹೆಸರುಗಳನ್ನು ಹೇಳಿ ಎಂದರೆ, ಥಟ್ ಅಂತ ಅಲ್ಲಿನ ಐದಾರು ಅತ್ಯುತ್ತಮ ಕಂಪನಿಗಳನ್ನು ಹೆಸರಿಸುತ್ತಾರೆ. ಆದರೆ ಜಪಾನ್ ದೇಶದ ಪ್ರಧಾನಿ ಯಾರೆಂದು ಕೇಳಿದರೆ ಶೇ.೯೯ರಷ್ಟು ಮಂದಿಯ ಹತ್ತಿರ ಉತ್ತರವಿಲ್ಲ ಎಂದರು.

ಆದ್ದರಿಂದ ಯಾವುದೇ ಒಂದು ದೇಶ ಅಭಿವೃದ್ಧಿಯಾಗಿದೆಯೆಂದು ಅಲ್ಲಿನ ಅತ್ಯುತ್ತಮ ಸಂಸ್ಥೆಗಳು ನಿರ್ಧರಿಸುವುದರಿಂದ ಇಲ್ಲಿ ದೇಶದ ಪ್ರಧಾನಿ ಮುಖ್ಯವಲ್ಲ. ಬದಲಾಗಿ ದೇಶದಲ್ಲಿ ಎಷ್ಟು ಉತ್ತಮ ಸಂಸ್ಥೆಗಳಿವೆ ಎಂಬುದು ಮುಖ್ಯವಾಗಿರುತ್ತದೆ ಎಂದ ಅವರು, ವಿದ್ಯಾರ್ಥಿಗಳಾದ ನೀವು ಸಹ ಎಷ್ಟೇ ಉನ್ನತ ಶಿಕ್ಷಣವನ್ನು ಪಡೆದುಕೊಂಡು ಉನ್ನತ ಹುದ್ದೆಗಳನ್ನು ಅಲಂಕರಿಸಬಹುದು. ಆದರೆ ಶಿಕ್ಷಣಕ್ಕಿಂತ ಮುಖ್ಯವಾಗಿ ಮಾನವೀಯತೆ, ಅನುಕಂಪ ನಿಮ್ಮ ಮನಸ್ಸಿನಲ್ಲಿ ಇರಬೇಕು. ಅದಿಲ್ಲದಿದ್ದರೆ ನೀವು ಪಡೆದ ಶಿಕ್ಷಣಕ್ಕೆ ಸಾರ್ಥಕತೆ ಇರುವುದಿಲ್ಲ ಎಂದು ವಿದ್ಯಾರ್ಥಿಗಳಿಗೆ ಸೂಚ್ಯವಾಗಿ ಹೇಳಿದರು.

ನಂತರ ೨೦೧೩-೧೪ನೇ ಸಾಲಿನ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ (ಪಿಜಿಡಿಎಂ)ನ ೧೭೮ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಮೈಸೂರಿನ ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್, ಉಪನಿರ್ದೇಶಕಿ ಡಾ.ಹೆಚ್.ಗಾಯತ್ರಿ, ಪಿಜಿಡಿಎಂ ವಿಭಾಗದ ಅಧ್ಯಕ್ಷೆ ಪ್ರೊ.ನೀತು ಗಣಪತಿ, ವಾಣಿಜ್ಯೋದ್ಯಮಿ ಆರ್.ಗುರು, ಬೆಂಗಳೂರು ಸೆಂಟರ್ ಫಾರ್ ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್ ನಿರ್ದೇಶಕ ಡಾ.ಪ್ರಸನ್ನಚಂದ್ರ, ಉಜಿರೆಯ ಎಸ್‌ಡಿಎಂ ಎಜುಕೇಷನಲ್ ಟ್ರಸ್ಟ್ ಕಾರ್ಯದರ್ಶಿ ಪ್ರೊ.ಎಸ್. ಪ್ರಭಾಕರ್, ಬೆಂಗಳೂರು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ನಿವೃತ್ತ ನಿರ್ದೇಶಕ ಡಾ.ಕೆ.ಆರ್. ಶ್ರೀನಿವಾಸ ಮೂರ್ತಿ ಉಪಸ್ಥಿತರಿದ್ದರು.

### ಚಿನ್ನದ ಪದಕ ವಿಜೇತರು

ವಿವಿಧ ವಿಷಯಗಳನ್ನು ಆಯ್ದುಕೊಂಡು ಉತ್ತಮ ಪ್ರತಿಭೆ ತೋರಿದ ವರುಣ್ ಕುಮಾರ್ ಮೂರು ಚಿನ್ನದ ಪದಕ, ದೀಪಕ್ ನೆಸರಿಕರ್, ವಾಸುದೇವ್ ನಾಯಕ್, ಸ್ಫೂರ್ತಿ ಎಸ್. ಗೌಡ, ಜುತಿಕಾ ಕಾಂದಾರ್ ತಲಾ ಒಂದೊಂದು ಚಿನ್ನದ ಪದಕ ಪಡೆದರು.




ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣ ಅಭಿವೃದ್ಧಿ ಸಂಸ್ಥೆ ಶುಕ್ರವಾರ ಏರ್ಪಡಿಸಿದ್ದ ೨೦೧೩-೧೪ನೇ ಸಾಲಿನ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್‌ನ ೧೯ನೇ ಘಟಿಕೋತ್ಸವದಲ್ಲಿ ಪದಕ, ಬಹುಮಾನ ಪಡೆದ ವಿದ್ಯಾರ್ಥಿಗಳೊಂದಿಗೆ ಗಣ್ಯರು ಚಿತ್ರದಲ್ಲಿದ್ದಾರೆ.